ದಿನಾಂಕಃ 03-03-2021.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾಸ್ವತ್ತುಗಳ ಸರ್ವೇ ನಂ. ನನಗೆ ಗೊತ್ತಿಲ್ಲ. ದಾವಾ ಆಸಿಗ್ತಳ ವಿಸ್ತೀರ್ಣ ಎಂದರೆ ನಾಗೇಂದ್ರಪ್ಪನವರು ೩ ಎಕರೆ ೩೨ ಗುಂಟೆ ಉಳುಮೆ ಮಾಡುತ್ತಾರೆ. ಕರಿಯಮ್ಮ ಮತ್ತು ಪ್ರತಿವಾದಿ-೨ರವರ ಸ್ವತ್ತು ಬೇರೆ ಇದೆ ಎನ್ನುತ್ತಾರೆ. ಆ ಸ್ವತ್ತುಗಳ ಸರ್ವೇ ನಂ. ನನಗೆ ಗೊತ್ತಿಲ್ಲ. ನಾಗೇಂದ್ರಪ್ಪನವರು ೩ ಎಕರೆ ೩೨ ಗುಂಟೆ ಉಳುಮೆ ಮಾಡುತ್ತಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾರು , ಯಾರ ವಿರುದ್ಧ ಹೂಡಿದ್ದಾರೆ ಎಂದರೆ ಸಾಕ್ಷಿ ಮಡಕ್ಕನವರು ಚಿಕ್ಕಣ್ಣನವರ ವಿರುದ್ಧ ಹೂಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿಗಳ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಪ್ರತಿವಾದಿ-೧ರವರ ಗಂಡನ ಹೆಸರು ಚಿಕ್ಕಣ್ಣ. ಚಿಕ್ಕಣ್ಣನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಚಿಕ್ಕಣ್ಣನವರ ತಂದೆಯ ಹೆಸರು ತಿಮ್ಮಣ್ಣ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಣ್ಣನವರಿಗೆ ಇಬ್ಬರು ಅಣ್ಣ-ತಮ್ಮಂದಿರು ಇದ್ದರು. ಅಣ್ಣ ನಾಗಣ್ಣ ಮತ್ತು ತಮ್ಮ ಕುಳ್ಳನಾಗ ಎಂದರೆ ಸರಿ. ಕುಳ್ಳನಾಗನವರಿಗೆ ಗುಜರಿ @ ಗುಜ್ಜಾರಿ ಎಂಬ ಮಗ ಇದ್ದನು ಎಂದರೆ ಸರಿ. ನಾಗಣ್ಣನಿಗೆ ಚಿಕ್ಕಣ್ಣ ಮತ್ತು ಬಿಳಿಯಪ್ಪ ಎಂಬ ಮಕ್ಕಳಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಚಿಕ್ಕವ್ವ ಎಂಬ ಮಗಳು ಇದ್ದರು ಎನ್ನುತ್ತಾರೆ. ನಾಗಣ್ಣನಿಗೆ ಚಿಕ್ಕವ್ವ ಎಂಬ ಮಗಳು ಇರಲಿಲ್ಲ ಎಂದರೆ ಸರಿಯಲ್ಲ. ಬಿಳಿಯಪ್ಪನಿಗೆ ಕೆಂಪಮ್ಮ ಎಂಬ ಹೆಂಡತಿ ಇದ್ದಳು ಎಂದರೆ ಸರಿ. ನಾಗಣ್ಣನ ಮಕ್ಕಳು ಬಿಳಿಯಪ್ಪ ಮತ್ತು ಚಿಕ್ಕಣ್ಣ ಯಾವುದೇ ಸಂತತಿ ಇಲ್ಲದೇ ಮರಣ ಹೊಂದಿದ್ದರು ಎಂದರೆ ಸರಿ. ಪ್ರತಿವಾದಿರವರ ಮಾವ ತಿಮ್ಮಯ್ಯನವರಿಗೆ ಇಬ್ಬರು ಮಕ್ಕಳು ಚಿಕ್ಕಣ್ಣ ಮತ್ತು

ನಾಗಣ್ಣ ಎಂದರೆ ಸರಿ. ನಾಗಣ್ಣನ ಹೆಂಡತಿ ಮಾಳಕ್ಕ ಎಂದರೆ ಸರಿ. ಗುಜರಿ @ ಗುಜ್ಜಾರಿ ಮಕ್ಕಳಿಲ್ಲದೇ ಮರಣ ಹೊಂದಿದರು ಎಂದರೆ ಸರಿ. ತಿಮ್ಮಯ್ಯ ಮತ್ತು ಕುಳ್ಳನಾಗರವರು ನಾಗಣ್ಣನವರಿಗಿಂತ ಮೊದಲೇ ಮರಣ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾಗಣ್ಣ ಮತ್ತು ಪ್ರತಿವಾದಿ-೧ರವರ ಗಂಡ ಮತ್ತು ಗಂಡನ ಅಣ್ಣ ನಾಗಣ್ಣ ಒಟ್ಟು ಕುಟುಂಬದಲ್ಲಿ ಮುಂದುವರೆದರು ಎಂದರೆ ನನಗೆ ಗೊತ್ತಿಲ್ಲ. ಅವರೊಂದಿಗೆ ಗುಜರಿ @ ಗುಜ್ಜಾರಿ ಸಹ ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಇವರೆಲ್ಲರೂ ಮೌಖಿಕವಾಗಿ ಪಾಲು ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಇವರ ಒಟ್ಟು ಕುಟುಂಬಕ್ಕೆ ವಾಜರಹಳ್ಳಿ ಸರ್ವೇ ನಂ.೫೪ರಲ್ಲಿ ಒಟ್ಟು ೧೯ ಎಕರೆ ೨೦ ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಅದರಲ್ಲಿ ನಾಗಣ್ಣನವರಿಗೆ ೬ ಎಕರೆ ೨೨ ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ತಿಮ್ಮಣ್ಣನಿಗೆ ೬ ಎಕರೆ ೧೮ ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಗುಜರಿ @ ಗುಜ್ಜಾರಿರವರಿಗೆ ೬ ಎಕರೆ ೧೪ ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರವಾಗಿ ಅವರೆಲ್ಲರ ಹೆಸರಿಗೆ ಕಂದಾಯ ದಾಖಲೆಗಳು ನೋಂದಣಿಯಾದವು ಮತ್ತು ಅವರು ಪ್ರತ್ಯೇಕ ಸ್ವಾಧೀನತೆಯಲ್ಲಿದ್ದರು ಎಂದರೆ ಸರಿಯಲ್ಲ. ಅದರಂತೆಯೇ ದುರಸ್ತಾಗಿ ಪೋಡಿ ಮಾಡಲಾಯಿತು ಎಂದರೆ ನನಗೆ ಗೊತ್ತಿಲ್ಲ. ನಾಗಣ್ಣನವರಿಗೆ ಸರ್ವೇ ನಂ.೫೪/೧ ಮತ್ತು ಸರ್ವೇ ನಂ.೫೪/೪ ಜಮೀನುಗಳು ಬಂದವು ಎಂದರೆ ನನಗೆ ಗೊತ್ತಿಲ್ಲ. ನಾಗಣ್ಣನವರ ಮರಣಾನಂತರ ಆ ಜಮೀನುಗಳನ್ನು ಅವರ ಮಕ್ಕಳು ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ-೧ರವರ ಗಂಡ ಮತ್ತು ಅವರ ಅಣ್ಣ ಸರ್ವೇ ನಂ.೫೪/೨ ಜಮೀನು ಬಂತು ಎಂದರೆ ಗೊತ್ತಿಲ್ಲ. ಗುಜ್ಜಾರಿಯವರಿಗೆ ಸರ್ವೇ ನಂ.೫೪/೩ ಮತ್ತು ೫೪/೫ ಜಮೀನುಗಳು ಬಂದವು ಎಂದರೆ ಗೊತ್ತಿಲ್ಲ. ಬಿಳಿಯಪ್ಪ

ಮತ್ತು ಚಿಕ್ಕಣ್ಣನವರು ಸಂತತಿ ಇಲ್ಲದೇ ಮರಣ ಹೊಂದಿದ ಕಾರಣ ಅವರಿಗೆ ಸೇರಿದ ಸರ್ವೇ ನಂ.೫೪/೧ ಮತ್ತು ಸರ್ವೇ ನಂ.೫೪/೪ ಜಮೀನುಗಳು ಮತ್ತು ಗುಜ್ಜಾರಿಯವರು ಮಕ್ಕಳಿಲ್ಲದೇ ಮರಣ ಹೊಂದಿದ ಕಾರಣ ಸರ್ವೇ ನಂ.೫೪/೩ ಮತ್ತು ಸರ್ವೇ ನಂ.೫೪/೫ನ್ನು ೧ನೇ ಪ್ರತಿವಾದಿಯ ಗಂಡ ಚಿಕ್ಕಣ್ಣ ಮತ್ತು ಅವರ ಅಣ್ಣ ನಾಗಣ್ಣನವರು ಅನುಭವಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾಗಣ್ಣ ಮತ್ತು ಮಾಳಕ್ಕನವರು ಮಕ್ಕಳಿಲ್ಲದೇ ಮರಣ ಹೊಂದಿದ್ದರಿಂದ ಅವರ ಜಮೀನುಗಳನ್ನು ಸಹ ಚಿಕ್ಕಣ್ಣನವರೇ ಅನುಭವಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಅವರ ಮರಣಾನಂತರ ಬಿಳಿಯಪ್ಪನ ಹೆಂಡತಿ ಕೆಂಪಮ್ಮ ಮತ್ತು ೧ನೇ ಪ್ರತಿವಾದಿ ಹೆಸರಿಗೆ ಆ ಜಮೀನುಗಳು ಬಂದವು ಎಂದರೆ ಸರಿ. ಕೆಂಪಮ್ಮನವರು ಮಕ್ಕಳಿದೇ ಮರಣ ಹೊಂದಿದ್ದರಿಂದ ಪ್ರತಿವಾದಿ-೧ರವರ ಹೆಸರಿಗೆ ಬಂದವು ಎಂದರೆ ಸರಿಯಲ್ಲ. ಪ್ರತಿವಾದಿ-೧ ಮತ್ತು ಅವರ ಮಕ್ಕಳು ಆ ಜಮೀನುಗಳ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಬಿಳಿಯಪ್ಪ ಮತ್ತು ಚಿಕ್ಕಪ್ಪ ನವರಿಗೆ ಚಿಕ್ಕವ್ವ ಎಂಬ ಸಹೋದರಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಿಕ್ಕವ್ವನ ಮಕ್ಕಳೇ ಗಿರಿಯಮ್ಮ ಮತ್ತು ಕೆಂಪಮ್ಮ ಎನ್ನುತ್ತಾರೆ. ಚಿಕ್ಕವ್ವನ ಮಕ್ಕಳು ಗಿರಿಯಮ್ಮ ಮತ್ತು ಕೆಂಪಮ್ಮ ಎಂದರೆ ಸುಳ್ಳು ಎಂದರೆ ಸರಿಯಲ್ಲ. ವಾದಿ-೧ ಮತ್ತು ೨ರವರು ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಗಿರಿಯಮ್ಮನ ಮಕ್ಕಳನ್ನು ಕೆಂಪಮ್ಮನ ಮನೆಯಲ್ಲಿ ಇಟ್ಟುಕೊಂಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಳಿಯಪ್ಪನ ಸಹೋದರಿ ಚಿಕ್ಕಮ್ಮ ಮತ್ತು ಮಡಕ್ಕ ಜಂಟೀ ಅನುಭವದಲ್ಲಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕಮ್ಮನ ಮರಣಾನಂತರ ಗಿರಿಯಮ್ಮನ ಮಕ್ಕಳು ನಾಗೇಂದ್ರ ಮತ್ತು ಕೃಷ್ಣಮೂರ್ತಿ ಮತ್ತು ಚಿಕ್ಕಣ್ಣರವರು ಯಾವತ್ತೂ ಪ್ರತಿವಾದಿ-೧ರವರೊಂದಿಗೆ ಜಂಟೀ ಸ್ವಾಧೀನದಲ್ಲಿಲ್ಲ

ಎಂದರೆ ಸರಿಯಲ್ಲ. ನಾನು ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧಪಟ್ಟವರಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಅಕ್ಕ-ಪಕ್ಕದಲ್ಲಿ ನಮ್ಮ ಜಮೀನುಗಳು ಇಲ್ಲಾ ಎದಂರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸ್ವತ್ತು ಸರ್ವೆ ನಂ.೬೨/೨ ದಾವಾ ಜಮೀನಿನ ಪಕ್ಕದಲ್ಲಿಯೇ ಇದೆ ಎನ್ನುತ್ತಾರೆ. ನನ್ನ ಸ್ವತ್ತು ದಾವಾಸ್ವತ್ತಿನ ಅಕ್ಕ-ಪಕ್ಕದಲ್ಲಿಲ್ಲ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ವೃತ್ತಿ ರಾಜಕೀಯವಾಗಿದ್ದು , ನಾನು ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರಸಲ್ಲಿಸಿ , ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ರಾಜಕೀಯವಾಗಿ ನನ್ನ ಮಾತನ್ನು ಕೇಳುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಮಾತನ್ನು ಕೇಳುವುದಿಲ್ಲ ಎಂದು ನಾನು ಅವರ ವಿರುದ್ಧ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.